ಇಂದು ದಿ: **14.03.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>-:ಪಾಟೀಸವಾಲು:ಪ್ರತಿವಾದಿಯ ಪರ: ಶ್ರೀ ಜಿ.ಬಿ.,ವಕೀಲರಿಂದ:-</u>

1. ನಾನು 2019 ರಿಂದ ನ್ಯಾಯಾಲಯಕ್ಕೆ ಬರುತ್ತಿದ್ದೇನೆ ಎಂದರೆ ಸಾಕ್ಷಿ ಇಸವಿ ನೆನಪಿಲ್ಲ ಎಂದು ಹೇಳುತ್ತಾರೆ. ನ್ಯಾಯಾಲಯದಲ್ಲಿ ಹೇಗೆ ಸಾಕ್ಷಿ ಹೇಳುತ್ತಾರೆ ಎನ್ನುವುದನ್ನು ನಾನೂ ನೋಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಹೆಸರಿಗೆ ಹೊಲ ಮಾಡಿಸಿಕೊಡಿ ಎಂದು ಕೇಸ್‌ನ್ನು ಸಲ್ಲಿಸಿರುತ್ತೇನೆ. ನಮ್ಮ ತಂದೆಯ ಹೆಸರು ದ್ಯಾಮಪ್ಪ. ನಮ್ಮ ಮೇಲೆ 02 ಕ್ರಿಮಿನಲ್ ಕೇಸ್‌ಗಳು ಇರುತ್ತವೆ. ನಾವು ಫಿರ್ಯಾದಿಯನ್ನು ಕೊಟ್ಟಿರುತ್ತೇವೆ, ಅವರು ಕೊಟ್ಟಿರುತ್ತಾರೆ. ಪ್ರತಿವಾದಿ ನನ್ನ ವಿರುದ್ಧ ಮತ್ತು ನಾನು ಪ್ರತಿವಾದಿಯ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನಮ್ಮ ತಂದೆಗೆ ತಮ್ಮನಾಗಬೇಕು. ನಮ್ಮ ತಂದೆಗೆ 4 ಜನ ಸಹೋದರರು ಇರುತ್ತಾರೆ. ನಮ್ಮ ತಂದೆ ಹಾಗೂ ಪ್ರತಿವಾದಿ ಯಾವ ಇಸವಿಯಲ್ಲಿ ಭಾಗ ಮಾಡಿಕೊಂಡಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ.

2. ಕ್ರಯದ ಕರಾರುಪತ್ರ ಮಾಡಿಕೊಟ್ಟಾಗ ದಾವಾ ಆಸ್ತಿ ಪ್ರತಿವಾದಿಯ ಹೆಸರಿನಲ್ಲಿ ಇತ್ತು. ಪ್ರತಿವಾದಿಗೆ ಮಕ್ಕಳು ಇರುವುದಿಲ್ಲ. ಎಸ್.ಸಿ. 114/2022 ರಲ್ಲಿ ನಾನು ಮೂರನೇ ಆರೋಪಿ ಇರುತ್ತೇನೆ ಎನ್ನುವುದು ನಿಜ. ಸದರಿ ಕೇಸಿನಲ್ಲಿ ಪ್ರತಿವಾದಿಗೆ ನಾನು ಮತ್ತು ನಮ್ಮ ತಂದೆ ಇತರರು ಸೇರಿ ಕೈಕಾಲುಗಳು ಮುರಿಯುವ ಹಾಗೇ ಹೊಡೆದಿರುತ್ತೇವೆ ಎಂದರೆ ಸರಿಯಲ್ಲ. ನಾನು ಶಾಲೆ ಕಲಿತಿಲ್ಲ. ಕನ್ನಡ ಸ್ವಲ್ಪ ಓದಲು ಬರುತ್ತದೆ. ನಿಪಿ-07 ರ ಸ್ಟಾಂಪ್‌ನ್ನು ಪ್ರತಿವಾದಿ ತಂದಿರುತ್ತಾನೆ. ಯಾರು ಅರ್ಜಿ ಕೊಟ್ಟು ಸ್ಟಾಂಪ್ ತಂದಿರುತ್ತಾರೆ ಎನ್ನುವುದು ಗೊತ್ತಿಲ್ಲ. ಸದರಿ ಅರ್ಜಿಯನ್ನು ಬ್ಯಾಂಕಿನಿಂದ ತಂದು ಹಾಜರುಪಡಿಸಲು ಆಗುವುದಿಲ್ಲ. ನಿಪಿ-07 ಸ್ಟಾಂಪ್‌ನ್ನು ಪ್ರತಿವಾದಿ ತಂದಿಲ್ಲ ನಾವೇ ಸೃಷ್ಟಿಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸ್ಟಾಂಪ್‌ಪೇಪರ್‌ನ್ನು ಪ್ರತಿವಾದಿ ತಂದಿದ್ದರೆ ಬ್ಯಾಂಕಿನಲ್ಲಿ ಅವರ ಅರ್ಜಿ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-07 ನ್ನು ದುರುದ್ದೇಶದಿಂದ ಲ್ಯಾಮಿನಿಷೇನ್ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪ್ರತಿವಾದಿ ಪರ ವಕೀಲರು ಪ್ರತಿವಾದಿಯ ವಕಾಲತ್ತನ್ನು ತೋರಿಸಿ ಅದರಲ್ಲಿರುವ ಸಹಿ ಮತ್ತು ನಿಪಿ-07 ರಲ್ಲಿರುವ ಸಹಿ ಎರಡೂ ಬೇರೆ ಇರುತ್ತವೆ ಎಂದರೆ ಸಾಕ್ಷಿ ಎರಡೂ ಒಂದೇ ಎಂದು ಹೇಳುತ್ತಾರೆ. ನಿಪಿ-07 ರಲ್ಲಿರುವ ಮೊದಲನೇ ಪುಟದ ಸಹಿಗೂ ಹಾಗೂ ಎರಡನೇ ಪುಟದ ಸಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿ ವ್ಯತ್ಯಾಸ ಕಾಣಿಸುವುದಿಲ್ಲ ಎಂದು ಹೇಳುತ್ತಾರೆ. ನಿಪಿ-07 ರಲ್ಲಿರುವ ಸಹಿಯನ್ನು ಹಾಗೂ ಪ್ರತಿವಾದಿಯ ಸಹಿಯನ್ನೂ ಬೆರಳಚ್ಚು ತಜ್ಞರ ಅಭಿಪ್ರಾಯಕ್ಕೆ ಕಳುಹಿಸಲು ನನ್ನ ತಕರಾರು ಇರುವುದಿಲ್ಲ. ನಿಪಿ-07 ಕ್ಕೆ ಹಾಕಿರುವ ಲ್ಯಾಮಿನೆಷನ್ ತೆಗೆದರೆ ಸದರಿ ಪತ್ರ ಹಾಳಾಗುತ್ತದೆ ಎನ್ನುವುದು ನಿಜ. ಸದರಿ ಪತ್ರದಲ್ಲಿರುವ ಸಹಿಯನ್ನು ಯಾರು ಮಾಡಿರುತ್ತಾರೆ ಎಂದು ಪರೀಕ್ಷೆಗೆ ಒಳಪಡಿಸಲು ಆಗಬಾರದು ಎಂದು ನಾವು ಲ್ಯಾಮಿನೇಷನ್ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ.

**-:** ಮುಂದುವರೆದ ಪಾಟೀಸವಾಲು**:**ಪ್ರತಿವಾದಿಯ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು **:-**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.